1	2	3	4	5
5.	K.R.S. M. & MIP Dn. Malavalli	1270.17	294.58	1564.75
6.	M.P. Dn. Ramanagar	536.17	92.36	628.53
7.	K.R. Dn. Kabini Colony	758.58	52.85	811.43
8.	K.C. Dn. Nanjangud	840.64	62.25	902.89
9.	No.2, K.C. Dn. Kollegal	1476.92	63.84	1540.76
10.	K.C.D. Division, T. Narasipura	209.72	240.86	450.58
11.	No. 1, VCC Dn. Mysore	676.01	179.7	855.71
12.	No.2, VCC Dn. Mysore	454.88	36.72	491.58
13.	H.D. Dn, Hulugunda	124.14	18.23	142.37
14.	H.R. Dn. Kushalnagar	740.33	130.92	871.25
15.	H.R.B.C. Dn. Hunsur	98.65	-	98.65
16.	H.R.B.C. Dn. K.R. Nagar	290.75	22.96	313.71
	Total	8967.84	1567.83	10536.67
17.	CEIS, Mysore	0	2.54	2.54
18.	SE KVCC Mysore	0	0	50.00
19.	SE Mandya	0	0.05	0.05
20.	SE Harangi	0	0.09	0.00
	Total	**0**	**2.68**	**2.88**
	Grand Total	**8967.84**	**1670.51**	**10538.35**

.....

117 (53): ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಎಡದಂಡೆ ಹಾಗೂ ಭದ್ರಾ ಬಲದಂಡೆ ನಾಲೆಗಳಲ್ಲಿ ಅಕ್ರಮ ಪಂಪು ಸೆಟ್ ಅಳವಡಿಸಿ ಅತಿಕ್ರಮ ಮಾಡಿರುವವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ:

ಆ) ತುಂಗಾ ಹಾಗೂ ಭದ್ರಾ ನಾಲೆಗಳಲ್ಲಿ ಹೊಳು ತುಂಬಿದ್ದು ಹೂಳೆತ್ತುವ ಯೋಜನೆ ಸರ್ಕಾರ ಕೈಗೊಂಡಿದೆಯೇ (ವಿವರವನ್ನು ಒದಗಿಸುವುದೇ)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಭದ್ರಾ ಕಾಲುವೆಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳನ್ನು ತೆಗೆಸುವ ಕ್ರಮ ಪ್ರಗತಿಯಲ್ಲಿದ್ದು, ಈವರೆಗೆ 76 ಪಂಪ್‌ಸೆಟ್ಟುಗಳನ್ನು ತೆಗೆಯಲು ತೀರ್ಮಾನ ಕೈಗೊಳ್ಳಲಾಗಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಈ ಸಂಬಂಧ ಯಾವುದೇ ನಿರ್ದಿಷ್ಟ ಯೋಜನೆ ಇರುವುದಿಲ್ಲ. ತುಂಗಾ ಹಾಗೂ ಭದ್ರಾ ನಾಲೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು ಪ್ರತಿ ವರ್ಷವೂ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ನಿರ್ವಹಿಸಲಾಗುತ್ತಿದೆ.

.....

118 (54): ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಆಟೋ ಹಾಗೂ ಬಸ್ ಮಾಲೀಕರುಗಳಿಗೆ ಕಿರುಕುಳ ನೀಡುತ್ತಿರುವುದರ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ನಿರ್ದಿಷ್ಟವಾದ ದೂರುಗಳು ಬಂದಿರುವುದಿಲ್ಲ. ಈ ವಿಷಯದಲ್ಲಿ ಸಂಬಂಧಪಟ್ಟವರಿಂದ ದೂರುಗಳು ಬಂದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

.....

119 (278): ಶ್ರೀ ಜಯಪ್ರಕಾಶ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರಿಯ ರಸ್ತೆ ನಿಧಿಯಲ್ಲಿ ಬ್ರಹ್ಮಾವರ ಕ್ಷೇತ್ರದಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳಾವುವು (ವಿವರ ನೀಡುವುದು)

ಆ) ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಕ್ಷೇತ್ರದಲ್ಲಿ ಪ್ರಮುಖ ಹೆದ್ದಾರಿ ಮತ್ತು ಸೇತುವೆಗಳನ್ನು ನಿರ್ಮಿಸಲು ಯೋಜಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ಕಾಮಗಾರಿಗಳನ್ನು ಆರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬ್ರಹ್ಮಾವರ ಮತಕ್ಷೇತ್ರದಲ್ಲಿ 2001–02ನೇ ಸಾಲಿಗೆ ಬಂದು ಕಾಮಗಾರಿಯನ್ನು, ಅಂದರೆ ಬ್ರಹ್ಮಾವರ ಸೀತಾ ನದಿ ರಸ್ತೆ ಕಿ.ಮೀ 10.5 ರಿಂದ 15.00 ಮತ್ತು ಕಿ.ಮೀ. 18.50 ರಿಂದ 24.00 ವರೆಗೆ ಅಭಿವೃದ್ಧಿಪಡಿಸಲು ರೂ. 70.20 ಲಕ್ಷ ಮೊತ್ತದಲ್ಲಿ ಕೇಂದ್ರ ರಸ್ತೆ ನಿಧಿಯಡಿ ಕೈಗೊಂಡಿದ್ದು ಕಾಮಗಾರಿಯನ್ನು ಮುಖ್ಯ ಇಂಜಿನಿಯರು, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ರವರು ನಿರ್ವಹಿಸಿರುತ್ತಾರೆ.

2004–05ನೇ ಸಾಲಿಗೆ ಸೀತಾನದಿ ಬ್ರಹ್ಮಾವರ ರಸ್ತೆಯ ಕಿಮೀ 30.00 ರಿಂದ 35.00 ವರೆಗೆ ಅಭಿವೃದ್ಧಿ ಪಡಿಸಲು ರೂ. 50.00 ಲಕ್ಷಗಳ ಮೊತ್ತಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸರ್ಕಾರದ ಪತ್ರ ದಿನಾಂಕ: 9.7.2004 ರಲ್ಲಿ ಸಲ್ಲಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.

ಆ) ಬ್ರಹ್ಮಾವರ ಕ್ಷೇತ್ರದಲ್ಲಿ 2 ಸೇತುವೆಗಳ.

1. ಶಿರೂರು–ಕೆನ್ಜೂರು ರಸ್ತೆ ಬಳಿ ಸೀತಾ ನದಿಗೆ ಸೇತುವೆ ರೂ. 150 ಲಕ್ಷ